# ಅಂಗೈಯಲ್ಲಿ ಅರಮನೆ

## ಸಾಂಬ್ರಾಣಿ ಹೊಗೆ



ನನ್ನ ಮಗಳು ಮತ್ತು ಅಳಿಯ ವಿದೇಶದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನನ್ನ ಮಗಳ ಹೆರಿಗೆಯ ಸಮಯದಲ್ಲಿ ನಾನು ಅಲ್ಲಿಗೆ ಹೋಗಬೇಕಾದ ಪ್ರಸಂಗ ಬಂದಿತು. ಅಲ್ಲಿಗೆ ಹೋಗುವಾಗ ಬಾಣಂತಿಗೆ ಬೇಕಾಗುವ ಸ್ವಲ್ಪ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದೆ. ಅದರಲ್ಲಿ ಸಾಂಬ್ರಾಣಿ ಪುಡಿಯು ಒಂದು. ಮಗಳ ಹೆರಿಗೆಯ ನಂತರ ಒಂದು ದಿನ ಇದ್ದಿಲು ಹೊತ್ತಿಸಿ ಚಿಕ್ಕ ಕಡಾಯಿಯಲ್ಲಿ ಅದರ ಮೇಲೆ ಸಾಂಬ್ರಾಣಿ ಹೊಗೆ ಹಾಕಿದೆ. ಅದನ್ನು ಬಾಣಂತಿ ಕೋಣೆಗೆ ಒಯ್ಯುವಾಗ ಒಮ್ಮೆಲೆ ಜೋರಾದ ಶಬ್ದದ ಗಂಟೆ ಬಾರಿಸತೊಡಗಿತು. ಭಯದಿಂದ ಕೈಕಾಲೆಲ್ಲ ನಿಂತು ಹೋದಂತೆ ಭಾಸವಾಯಿತು. ಕ್ಷಣದಲ್ಲಿಯೇ ಏನಾಯಿತು ಎನ್ನುವ ಅಷ್ಟರಲ್ಲಿ ಕೋಣೆಯಿಂದ ನನ್ನ ಮಗಳು ಓಡಿಬಂದು ಒಂದು ವಿದ್ಯುತ್ ಬಟನ್ ಆಫ್ ಮಾಡಿದಳು. ಆಗ ಶಬ್ದ ಬರುವುದು ನಿಂತು ಹೋಯಿತು. ನನ್ನ ಮಗಳು ಹೇಳಿದ ನಂತರ ತಿಳಿಯಿತು ಮನೆಯಲ್ಲಿ ಅಕಸ್ಮಾತ್ ಆಗಿ ಬೆಂಕಿ, ಹೊಗೆ ಕಾಣಿಸಿಕೊಂಡರೆ ಮುಂಜಾಗ್ರತೆಯಿಂದ ಫೈರ್ ಅಲಾರ್ಮ್ ಆಗುವ ವ್ಯವಸ್ಥೆ ಇಟ್ಟಿರುತ್ತಾರಂತೆ. ಅಬ್ಬಾ!! ಎಷ್ಟೊಂದು ಭಯವಾಗಿತ್ತು. ಸಾಕಪ್ಪ. ಸಾಕು. ಈ ಸಾಂಬ್ರಾಣಿ ಸಹವಾಸ. ಅಂತ ಕೈ ಮುಗಿದೆ.

**ಶೋಭಾ ಸಿದ್ದಣ್ಣವರ್**

## ಎಮ್ಮೆಯೆಂದರೆ ಹೆಣ್ಣು



ಬೇಸಿಗೆ ರಜೆಗೆಂದು ಊರಿನಿಂದ ಚಿಕ್ಕಮ್ಮನ ಮಗಳು ವೈಶಾಲಿ ಬಂದಿದ್ದಳು. ಪೇಟೆಯಿಂದ ಹಳ್ಳಿಗೆ ಬಂದಿದ್ದ ಅವಳಿಗೆ ಇಲ್ಲಿನ ಎಲ್ಲವೂ ಕುತೂಹಲದ ಸಂಗತಿಗಳೇ. ಕೊಟ್ಟಿಗೆಯಲ್ಲಿದ್ದ ಕೋಣ ಮತ್ತು ಎಮ್ಮೆಗಳನ್ನು ಕಂಡು ಕೋಣ ಎಂದರೆ ಗಂಡು, ಎಮ್ಮೆ ಎಂದರೆ ಹೆಣ್ಣು ಎಂದು ಮನನ ಮಾಡಿಕೊಂಡು ನಂತರ ತನ್ನಷ್ಟಕ್ಕೆ 'ಹ್ಞಾ... ಹ್ಞಾ... ಈಗ ಗೊತ್ತಾಯಿತು' ಎಂದು ಖುಷಿಗೊಂಡಳು. ನಮ್ಮಲ್ಲಿ ಜಾನುವಾರುಗಳನ್ನು ಹೊರಗೆ ಮೇಯಲು ಬಿಡುತ್ತೇವೆ. ಬೆಳಿಗ್ಗೆ ಹೊರಬಿಟ್ಟ ಎಮ್ಮೆ ಸಂಜೆ ಹೊತ್ತಿಗೆ ವಾಪಾಸಾದಾಗ, ವೈಶಾಲಿ ಒಮ್ಮೆಗೆ 'ದೊಡ್ಡಮ್ಮ ದೊಡ್ಡಮ್ಮ... ಹೆಣ್ಣೆಮ್ಮೆ ಬಂತು ಬೇಗ ಬನ್ನಿ' ಎಂದು ಕರೆದಾಗ ನಗುವ ಸರದಿ ನಮ್ಮೆಲ್ಲರದು.

**ಹ.ನಾ. ಸುಬ್ರಹ್ಮಣ್ಯ**